# ಲೋಕದ ಮಾರ್ಗದಿಂದ ತಪ್ಪಿಸಿಕೊಳ್ಳುವುದು

ಸಬ್ಬತ್ತಿನ ಮಧ್ಯಾಹ್ನ: ಈ ವಾರದ ಪಾಠದ ಅಧ್ಯಯನಕ್ಕಾಗಿ:ಕೀರ್ತನೆ 119:11; ಎಫೆಸ 6:18; ರೋಮ 8;5,6; ಇಬ್ರಿಯರಿಗೆ 11:1–6;1 ಅರಸುಗಳು 3:14;ಯೆಹೆಜ್ಕೆಲನು 36:26,27.

**ಸ್ಮರಣವಾಕ್ಯ: 'ಧನವು ಕೋಪದ ದಿನದಲ್ಲಿ ವ್ಯರ್ಥ; ಧರ್ಮವು ಮರಣವಿಮೋಚಕ. ಧನವನ್ನೇ ನಂಬಿದವನು ಬಿದ್ದು ಹೋಗುವನು ಸದ್ಧರ್ಮಿಯು ಕುಡಿಯ ಹಾಗೆ ಚಿಗುರುವನು. (ಜ್ಞಾನೋಕ್ತಿಗಳು 11:4, 28).**

ಸೈತಾನನು ಯೇಸುವಿನ ಜೊತೆ ವಿಫಲನಾದರೂ ಕೂಡ ಅವನು ಇತರರ ಜೊತೆಯಲ್ಲಿ ಗೆದ್ದಿದ್ದಾನೆ. ಲೋಕದ ಆಸೆಗಳ ಬಲೆಯಿಂದ ತಪ್ಪಿಸಲು ಶಕ್ತಿಯಿರುವ ದೇವರ ಆಯುಧಗಳನ್ನು ಧರಿಸದೆ ಹೋದರೆ ನಮ್ಮ ಸಂಗಡ ಕೂಡ ಅವನು ಜಯ ಸಾಧಿಸುವನು.

ಆದ್ದರಿಂದ ನಮ್ಮ ಸಕಲ ಅವಶ್ಯಕತೆಗಳನ್ನು ಪೂರೈಸುವ ಪರಲೋಕದ ದೇವರ ಕಡೆಗೆ ನಮ್ಮ ದೃಷ್ಟಿಯನ್ನು ಸಾಧಿಸಬೇಕು. ದಾವಿದನು ತನ್ನ ಜೀವನದಲ್ಲಿ ಈ ನಿಜವಾದ ಸತ್ಯವನ್ನು ಅರಿತು ಹೀಗೆ ಬರೆಯುತ್ತಾನೆ "ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು; ಯೆಹೋವನಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ." (ಕೀರ್ತನೆ 34:10) ಸೊಲೊಮನನು ಬೆಳ್ಳಿ ಬಂಗಾರಕ್ಕಿಂತ ಜ್ಞಾನವನ್ನು ಮತ್ತು ವಿವೇಕವನ್ನು ಸಂಪಾದಿಸುವುದು ಶ್ರೇಷ್ಠ ಎಂದು ಗ್ರಹಿಸಿದನು (ಜ್ಞಾನೋಕ್ತಿಗಳು 3:13,14). ನಮ್ಮ ದೃಷ್ಟಿಯನ್ನು ನಾವು ಹೊಂದಿರುವ ವಸ್ತುಗಳ ಮೇಲಿಂದ ಕ್ರಿಸ್ತನ ಕಡೆಗೆ ತಿರುಗಿಸುವುದರಿಂದ ನಮಗೆ ನಿಜವಾದ ಸಂತೋಷ ಮತ್ತು ಸರಿಯಾದ ಜೀವನದ ದಾರಿ ಸಿಗುತ್ತದೆ.

ಯೇಸುವಿನ ಜೊತೆಗಿನ ಸರಿಯಾದ ಮತ್ತು ನಿರಂತರ ಸಂಬಂಧ ಮಾತ್ರ ಲೋಕದ ಆಸೆಗಳಿಂದ ನಮ್ಮನ್ನು ತಪ್ಪಿಸಲು ಸಾಧ್ಯ. ಈ ವಾರ ನಾವು ಆ ಸಂಭಂದದ ವಿವಾದ ಆಯಾಮಗಳನ್ನು ಗಮನಸೋಣ, ಮತ್ತು ನಮ್ಮ ಲೋಕದ ಮುಖವಾಡವನ್ನು

ಗುರುತಿಸುವುದು ನಮ್ಮ ಅಧ್ಯಾತ್ಮಿಕತೆಗೆ ಎಷ್ಟು ಮುಖ್ಯವಾದದ್ದು ಹಾಗೂ ನಾವು ಜೀವಿಸುವುದಕ್ಕೆ ಯೇಸುವು ಮಾತ್ರ ನಿಜವಾದ ಕಾರಣ ಎಂದು ಹೇಗೆ ಗ್ರಹಿಸುವುದು ಎಷ್ಟು ಮುಖ್ಯವಾದದ್ದು ಎಂದು ಕಲಿಯೋಣ. .

ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಜನವರಿ 27.

**ಪಾಠ 4 ಲೋಕದ ಮಾರ್ಗದಿಂದ ತಪ್ಪಿಸಿಕೊಳ್ಳುವುದು ಜನವರಿ 20–26**

**ಭಾನುವಾರ ಜನವರಿ 21**

## ಕ್ರಿಸ್ತನೊಂದಿಗೆ ಸಂಬಂಧ

ಯಾರ ಬಳಿ ಹೆಚ್ಚು ಇರುವುದಿಲ್ಲವೋ ಅವರ ಸಹಿತವಾಗಿ, ಲೋಕದ ವಸ್ತುಗಳ ಮೇಲಿನ ವ್ಯಾಮೋಹವು ಆತ್ಮವನ್ನು ಕ್ರಿಸ್ತನ ಬದಲಿಗೆ ಲೋಕದ ಜೊತೆಗೆ ಕಟ್ಟಿ ಹಾಕುವಂತಹ ಶಕ್ತಿಶಾಲಿಯಾದ ಸರಪಳಿಯಾಗುತ್ತದೆ. ನಮ್ಮ ಬಳಿಯಲ್ಲಿ ಹೆಚ್ಚು ವಸ್ತುಗಳು ಇಲ್ಲದಿದ್ದರೂ ಕೊಡ ಆ ವಸ್ತುಗಳನ್ನು ಪಡೆದುಕೊಳ್ಳುವ ಬಯಕೆಯನ್ನು ದೇವರ ಶಕ್ತಿಯ ಅಧಿನಕ್ಕೆತರದೆ ಹೋದರೆ ಅದು ಒಂದು ಭಯಂಕರವಾದ ಶಾಪವಾಗಿ ಆತ್ಮವನ್ನು ರಕ್ಷಣೆಯಿಂದ ದೂರ ಸೆಳೆಯುತ್ತದೆ. ಸೈತಾನನಿಗೆ ಇದು ಗೊತ್ತು ಅದ್ದರಿಂದಲೆ ಅವನು ಲೋಕದ ವಸ್ತುಗಳ ಆಸೆಯನ್ನು ಸಾಧ್ಯವಾದಷ್ಟು ಜನರನ್ನು ಸೆಳೆಯಲು ಒಂದು ತಂತ್ರವಾಗಿ ಉಪಯೋಗಿಸುತ್ತಾನೆ.

**ನಮಗಿರುವ ಒಂದೇ ರಕ್ಷಣೆ ಯಾವುದು**?

'ಮೆಲಿರುವಂಥವುಗಳ ಮೇಲೆ ಮನಸ್ಸಿಡಿರಿ ಭೂಸಂಭಂದವುಗಳ ಮೇಲೆ ಇಡಬೇಡಿರಿ? ಕೊಲೆಸ್ಸೆ 3:2 ಪೌಲನು ಹೇಳುವುದನ್ನು ನಾವು ಮಾಡುಲು ಹೇಗೆ ಸಾಧ್ಯ" ಕಿರ್ತನೆ 119;11, ಎಫೆಸ 6:18).

______________________________

______________________________

ನಮ್ಮ ಮನಸ್ಸನ್ನು ಯಾವುದರ ಮೇಲೆ ಕೇಂದ್ರೀಕರಿಸಬೇಕು ಎಂಬುದರ ಕುರಿತಾಗಿ ಇನ್ನೂ ಯಾವ ವಚನಗಳು ಏನು ಹೇಳುತ್ತವೆ? (ಉದಾಹರಣೆಗೆ ಫಿಲಿಪ್ಪಿಯವರಿಗೆ



4:18)

______________________________

______________________________

ಕೂಡ ಕ್ರಿಸ್ತನ ಜೊತೆಗಿನ ಅನ್ಯೋನ್ಯ ಸಂಬಂಧವು ಮಾತ್ರ ಜೀವನದ ಏಳು ಬೀಳುಗಳಲ್ಲಿ ಲೋಕದ ಮೇಲಿನ ಆಸೆಯು ಯಾವುದೇ ರೂಪದಲ್ಲಿ ಬಂದರೂ ಕೂಡ ತಡೆಯಬಹುದಾದ ಔಷಧವಾಗಿದೆ. (ಕೀರ್ತನೆ 34:1). ಮೋಶೆಯು 'ಐಗುಪ್ತ ದೇಶದ ಸರ್ವಐಶ್ವರ್ಯಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠ ಭಾಗ್ಯವೆಂದೆನಸಿಕೊಂಡನು. (ಇಬ್ರಿಯರಿಗೆ 11:26). ಯಾವುದೇ ಸಂಭಂದಗಳಿಗಿಂತ ಕ್ರಿಸ್ತನು ನಮ್ಮ ಮೊದಲ ಅದ್ಯತೆಯಾಗಿರಬೇಕು. ಕ್ರಿಸ್ತನು ದೃಢವಾದ ಬದ್ದತೆಯನ್ನು ಹುಡುಕುತ್ತಾನೆ. ನಾವು ಆತನನ್ನು ನಂಬುವುದರಿಂದ ಬರುವ ಉಪಯೋಗಗಳನ್ನು ಬಯಸದೆ, ಕ್ರಿಸ್ತನು ಯಾರು ಮತ್ತು ಆತನು ನಮಗಾಗಿ ಏನು ಮಾಡಿದ್ದಾನೆ ಎಂಬುದರ ಮೇಲೆ ನಮ್ಮ ಭಕ್ತಿಯು ಆಧಾರವಾಗಿರಬೇಕು.

ನಮ್ಮ ಜೀವನಗಳು ಕ್ರಿಸ್ತನಲ್ಲಿ ಅಡಕವಾಗಿವೆ, ಮತ್ತು ಆತನ ಯೋಜನೆಗಳು ನಮ್ಮ ಯೋಜನೆಗಳಾಗಿರಬೇಕು. ನಿಜವಾದ ಬದ್ದತೆಯೆಂದರೆ, ನೇಗಿಲ ಮೇಲೆ ನಮ್ಮ ಕೈ ಹಾಕಿ 'ಹಿಂದಕ್ಕೆ ನೋಡಬಾರದು' (ಲೂಕ 9:62) ನಾವು ಈ ರೀತಿಯ ಬದ್ದತೆಯನ್ನು ತೋರಿಸಿದಾಗ ಯೇಸುವು ನಮ್ಮನ್ನು ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಮೇಲಕ್ಕೆ ತರುತ್ತಾನೆ. ನಾವು ಆತನಿಗೆ ನಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡರೆ ನಮ್ಮ ಆತ್ಮದ ಮೇಲಿರುವ ಲೋಕದ ವ್ಯಾಮೋಹವನ್ನು ನಾವು ಮುರಿಯಬಹುದು. ನಾವು ವಸ್ತು ಕೇಂದ್ರಿಕೃತದಿಂದ ಕ್ರಿಸ್ತ ಕೆಂದ್ರಿಕೃತರಾಗಬೇಕು, ಅದು ಮಾತ್ರ ನಮ್ಮ ಹೃದಯದಲ್ಲಿರುವ ಶೂನ್ಯವನ್ನು ತುಂಬಲು ಸಾಧ್ಯವಾಗುತ್ತದೆ.

ನಿಮಗೆ ಲೋಕದ ವಸ್ತುಗಳು ಬೇಕಾದ ಸಮಯವನ್ನು ಜ್ಞಾಪಕಮಾಡಿಕೊಳ್ಳಿರಿ ನಿಮಗೆ ಆ ವಸ್ತು ಬಹಳ ಅವಶ್ಯಕತೆಯಿದೆಯೇ. ನೀವು ಬಯಸುವ ಸಮಯದಲ್ಲಿ ಇರುವ ಆ ಕೋರಿಕೆಯು ಆ ವಸ್ತುವನ್ನು ಪಡೆಯುವ ಕೊನೆಯ ಹಂತದಲ್ಲಿ ಅದೇ ತೆರನಾದ ಕೋರಿಕೆ ಇರುವುದಿಲ್ಲ ಎಂಬುದನ್ನು ಗಮನಿಸಬೇಕು?

**ಪಾಠ 4ಲೋಕದ ಮಾರ್ಗದಿಂದ ತಪ್ಪಿಸಿಕೊಳ್ಳುವುದು ಜನವರಿ 20–26**

**ಸೋಮವಾರ ಜನವರಿ 22**

## ವಾಕ್ಯದಲ್ಲಿ

ಪ್ರಪಂಚದೆಲ್ಲೆಡೆ ಸರಿಸುಮಾರು ಆರು ಕೋಟಿ ಸತ್ಯವೇದಗಳನ್ನು ಹಂಚಲಾಗಿದೆ, ಆದರೆ ಅದರಲ್ಲಿ ಎಷ್ಟು ಸತ್ಯವೇದಗಳನ್ನು ದೇವರ ಸಜೀವ ವಾಕ್ಯವೆಂದು ಪರಿಗಣಿಸಲಾಗಿದೆ? ಎಷ್ಟು ಸತ್ಯವೇದಗಳನ್ನು ತೆರೆದ ಹೃದಯದಿಂದ ಸತ್ಯವನ್ನು ಅರಿಯುವ ಉದ್ದೇಶದಿಂದ ಓದಲಾಗುತ್ತದೆ?

ಸರಿಯಾದ ಸತ್ಯವೇದದ ಅಧ್ಯಯನವು ನಮ್ಮ ಆಧ್ಯಾತ್ಮಿಕತೆಯನ್ನು ಸರಿಯಾಗಿ ನಡೆಯುವಂತೆ ಮಾಡುತ್ತದೆ ಮತ್ತು ಲೋಕದ ಗಲಿಬಿಲಿ ಹಾಗೂ ಸುಳ್ಳುತನದಿಂದ ಕಾಪಾಡುತ್ತದೆ. ಸತ್ಯವೇದವು ಸಜೀವವುಳ್ಳ ವಾಕ್ಯವಾಗಿದ್ದು ದೈವ ಪ್ರೇರಣೆಯನ್ನು ಹೊಂದಿದೆ. (ಇಬ್ರಿಯರಿಗೆ 4:12) ಅದು ನಮ್ಮನ್ನು ಸತ್ಯದ ಕಡೆಗೆ ನಡೆಸುವಷ್ಟು ಬೇರೆ ಯಾವುದು ಕೂಡ ನಡೆಸಲು ಸಾಧ್ಯವಿಲ್ಲ. ಸತ್ಯವೇದವು ನಮ್ಮ ಅನುದಿನದ ಜೀವನಕ್ಕೆ ಕ್ರಿಸ್ತನು ತೋರಿಸುವ ದಿಕ್ಸೂಚಿಯಾಗಿದೆ, ಮತ್ತು ಅದು ನಮ್ಮನ್ನು ಜ್ಞಾನವಂತರಾಗಿ ಮಾಡಿ ಹಾಗೂ ನಮ್ಮ ಸ್ವಭಾವವನ್ನು ಬದಲಾಯಿಸುತ್ತದೆ.

ಯೋಹಾನ 5:39, 14:6, ಮತ್ತು 20:31ನ್ನು ಓದಿರಿ, ಸತ್ಯವೇದವು ಅದರಲ್ಲೂ ವಿಶೇಷವಾಗಿ ಸುವಾರ್ತೆಗಳು ಕ್ರಿಸ್ತನ ಕುರಿತಾಗಿ ನಮಗೆ ಅಧಿಕಾರಿಯುತವಾದ ಮಾಹಿತಿಯನ್ನು ನೀಡುತ್ತವೆ. ಯೋಹಾನನಲ್ಲಿ ಹೇಳಲಾಗಿರುವ ಈ ವಿಶೇಷವಾದ ವಾಕ್ಯಗಳು ಕ್ರಿಸ್ತನು ನಮಗೆ ಯಾಕೆ ಪ್ರಾಮುಖ್ಯ ಮತ್ತು ನಾವು ನಂಬುವ ಎಲ್ಲದಕ್ಕೂ ಆತನು ಯಾಕೆ ಮುಖ್ಯ ಎಂದು ಹೇಳುತ್ತವೆ?

ಸತ್ಯವೇದವು ಸತ್ಯದ ಸಂಪನ್ಮೂಲವಾಗಿರುವುದರಿಂದ ನಾವು ಸತ್ಯವೇದವನ್ನು ಅಧ್ಯಯನ ಮಾಡುತ್ತೇವೆ.ಯೇಸುವು ಸತ್ಯವಾಗಿದ್ದಾನೆ, ಕ್ರಿಸ್ತನನ್ನು ನಾವು ಯಾವ ರೀತಿಯಲ್ಲಿ ಕ್ರಿಸ್ತನ ಕುರಿತಾಗಿ  ತಿಳಿದುಕೊಳ್ಳಬೇಕೋ ಆ ರೀತಿಯಲ್ಲಿ ಸತ್ಯವೇದದಲ್ಲಿ ನಾವು ತಿಳಿದುಕೊಳ್ಳಬಹುದು. ದೇವರ ವಾಕ್ಯದಲ್ಲಿ ಹಳೆಯ ಮತ್ತು ಹೊಸ ಒಡಂಬಡಿಕೆಯಲ್ಲಿ ಯೇಸು ಯಾರು ಮತ್ತು ಆತನು ನಮಗಾಗಿ ಏನು ಸಾಧಿಸಿದನು ಎಂಬುದನ್ನು ನಾವು ಕಲಿಯುತ್ತೇವೆ. ನಂತರ ನಾವು ಆತನ ಮೇಲೆ ಪ್ರೀತಿಯನ್ನು ಬೆಳೆಸಿಕೊಳ್ಳುತ್ತೇವೆ, ಮತ್ತು ನಮ್ಮ ಜೀವನಗಳನ್ನು ಆತನ ಕೈಗೆ ಒಪ್ಪಿಸಿಕೊಡುತ್ತೇವೆ. ಆತನ ವಾಕ್ಯದಲ್ಲಿ ಹೇಳಿರುವ ಹಾಗೆ ನಾವು ಕ್ರಿಸ್ತನ ಮಾತುಗಳನ್ನು ಮತ್ತು ಆತನ ಮಾರ್ಗಗಳನ್ನು ಅನುಸರಿಸಿ ನಡೆದುಕೊಂಡರೆ ನಾವು ಲೋಕದ ಮಾರ್ಗದಿಂದ ಮತ್ತು ಪಾಪದಿಂದ ತಪ್ಪಿಸಿಕೊಳ್ಳಬಹುದು. ಆದದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವುದು.(ಯೋಹಾನ 8:36)



ರೋಮ 8:5,6 ಯಾವುದರ ವಿರುದ್ಧ ನಾವು ಎಚ್ಚರವಾಗಿರಬೇಕು, ಮತ್ತು ನಮ್ಮ ಮನಸ್ಸುಗಳನ್ನು ಜಯಿಸಲು ದೇವರ ವಾಕ್ಯವು ನಮಗೆ ಹೇಗೆ ಸಹಾಯ ಮಾಡುತ್ತದೆ.

ಲೋಕದ ಮೇಲಿನ ಅಸೆ, ಅದರಲ್ಲೂ ವಿಶೇಷವಾಗಿ ಲೋಕದ ವಸ್ತುಗಳ ಮೇಲಿನ ವ್ಯಾಮೋಹವು ನಾವು ಎಚ್ಚರ ವಹಿಸದಿದ್ದರೆ, ನಮ್ಮನ್ನು ದೇವರ ಬಳಿಯಿಂದ ದೂರ ಸೆಳೆಯುತ್ತದೆ.ಆದ್ದರಿಂದ ನಾವು ದೇವರ ವಾಕ್ಯದಲ್ಲಿ ನಮ್ಮನ್ನು ನಾವು ಅಡಗಿಸಿಕೊಳ್ಳಬೇಕು. ಈ ವಾಕ್ಯವು ಕ್ರೈಸ್ತಿಯ ಜೀವನಕ್ಕೆ ಬಹಳ ಮುಖ್ಯವಾದ ನಿತ್ಯ ಮತ್ತು ಅದ್ಯಾತ್ಮಿಕ ವಾಸ್ತವಗಳ ಕಡೆಗೆ ನಮ್ಮ ಮನಸ್ಸನ್ನು ಸೆಳೆಯುತ್ತದೆ.

ಲೋಕದ ಮೇಲಿನ ವಸ್ತುಗಳ ಆಸೆಯು ನಮ್ಮನ್ನು ಎಂದಿಗೂ ಕೂಡ ಅಧ್ಯಾತ್ಮಿಕ ನೈತಿಕತೆಯ ಕಡೆಗೆ ನಡೆಸುವುದಿಲ್ಲ, ಬದಲಿಗೆ ಸತ್ಯವೇದದ ನಿಯಮಗಳಿಗೆ ವಿರುದ್ಧವಾಗಿ ದುರಾಶೆ, ಸ್ವಾರ್ಥ, ಮತ್ತು ದುರಾಶೆಯ ಕಡೆಗೆ ಎಳೆಯುತ್ತದೆ. ಆದರೆ ಸತ್ಯವೇದವು ಇತರರಿಗಾಗಿ ನಾವು ಹೇಗೆ ತ್ಯಾಗ ಮಾಡಬೇಕು ಎಂದು ತೋರಿಸುತ್ತದೆ. ಇದಕ್ಕೆ ವಿರುದ್ಧವಾಗಿ ಲೋಕದ ಆಸೆಯು ನಮಗಾಗಿ ಮತ್ತು ನಮ್ಮ ಸ್ವಾರ್ಥಕ್ಕಾಗಿ ಹೇಗೆ ವಸ್ತುಗಳನ್ನು ಕ್ರೂಡಿಕರಿಸಿಕೊಳ್ಳಬೇಕು ಎಂದು ತಿಳಿಸುತ್ತದೆ. ಯೇಸುವಿನ ಬೋಧನೆ ಇದಕ್ಕೆ ವಿರುದ್ಧವಾಗಿದೆ.

ಮಂಗಳವಾರ ಜನವರಿ 23

## ಪ್ರಾರ್ಥನೆಯ ಜೀವನ

'ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು? (ಯೋಹಾನ 17:3)ಕ್ರೈಸ್ತರು ಯಾವಾಗಲೂ ಹೇಳುವ ಹಾಗೆ ದೇವರೊಂದಿಗಿನ ಅವರ ಸಂಬಂಧವು ಅವರ ನಂಬಿಕೆಯಾಗಿದೆ. ದೇವರನ್ನು ಅರಿಯುವುದು 'ನಿತ್ಯಜೀವ' ವಾದರೆ ಆ ಜೀವನವನ್ನು ನಾವು ಆತನ ಜೊತೆಗಿನ ಸಂಬಂಧದಿಂದ ಮಾತ್ರ ಹೊಂದಲು ಸಾಧ್ಯವಿದೆ. ಆ ಸಂಬಂಧಕ್ಕೆ ಬಹಳ ಮುಖ್ಯವಾದದ್ದು ಸಂಪರ್ಕ. ನಿನ್ನೆಯ ದಿನ ನಾವು ನೋಡಿದ ಹಾಗೆ ದೇವರು ತನ್ನ ವಾಕ್ಯದ ಮೂಲಕ ನಮ್ಮ ಜೊತೆ ಮಾತನಾಡುತ್ತಾನೆ. ನಾವು ಪ್ರಾರ್ಥನೆಯ ಮೂಲಕ ಆತನ ಜೊತೆ ಸಂಭಾಷಣೆ ನಡೆಸುತ್ತೇವೆ.

ಒಂದು ವೇಳೆ ನಾವು ನೋಡಿದ ಹಾಗೆ, ಲೋಕದ ಮೇಲಿನ ವಸ್ತುಗಳ ಮೇಲೆ ನಮ್ಮ ಮನಸ್ಸನ್ನು ಇಡುವುದಕ್ಕಿಂತ ಪರಲೋಕದ ಮೇಲಿನ ವಸ್ತುಗಳ ಮೇಲೆ ನಮ್ಮ ಮನಸ್ಸನ್ನು ಇಡಬೇಕಾಗಿದೆ, ಇದಕ್ಕೆ ಪ್ರಾರ್ಥನೆಯು ಬಹಳ ಮುಖ್ಯವಾದದ್ದು. ಯಾಕೆಂದರೆ ಪ್ರಾರ್ಥನೆಯು ತನ್ನ ಸ್ವಭಾವದ ಹಾಗೆ ಈ ಲೋಕದ ಹೊರಗಿನ ಕ್ಷೇತ್ರಕ್ಕೆ ನಮ್ಮನ್ನು ನಡೆಸುತ್ತದೆ.

ಆದರೂ ಕೂಡ ನಾವು ಇಲ್ಲಿ ಎಚ್ಚರಿಕೆಯಾಗಿರಬೇಕು ಯಾಕೆಂದರೆ ಕೆಲವೊಂದು ವೇಳೆ ನಮ್ಮ ಪ್ರಾರ್ಥನೆಯು ಕೂಡ ನಮ್ಮ ಸ್ವಾರ್ಥ ಸ್ವಭಾವವನ್ನು ತೋರಿಸುವ ಪ್ರದರ್ಶನವಾಗುತ್ತದೆ. ಆದ್ದರಿಂದ ನಾವು ದೇವರ ಚಿತ್ತಕ್ಕೆ ಅನುಸಾರವಾಗಿ ಪ್ರಾರ್ಥಿಸಬೇಕು.

ಕೆಲವು ವರ್ಷಗಳ ಹಿಂದೆ ಒಬ್ಬ ಮಹಿಳೆಯು ಹೀಗೆ ಹಾಡಿದಳು "ನನಗೆ ಒಂದು ಮರ್ಸಿಡೆಸ್ ಬೆಂಜ್ ಕಾರನ್ನು ನೀನು ಕೊಂಡುಕೊಡುವುದಿಲ್ಲವೋ" ಇದೊಂದು ದೇವರಲ್ಲಿರುವ ನಂಬಿಕೆಯನ್ನು ಲೋಕದ ಸ್ವಾರ್ಥಕ್ಕೆ ಉಪಯೋಗಿಸುವುದಾಗಿದೆ. ನಾವು ಕೂಡ ಕೆಲವೊಂದು ಬಾರಿ ಪ್ರಾರ್ಥಿಸುವಾಗ ದೇವರಿಗೆ ನಮ್ಮನ್ನು ನಾವು ಸಮರ್ಪಿಸಿಕೊಂಡು ಲೋಕದ ಪಾಲಿಗೆ ಸಾಯುವುದಾಗಿದೆ, ಇದರ ಮೂಲಕ ನಾವು ನಮ್ಮ ಚಿತ್ತವನ್ನು ಬಿಟ್ಟು ದೇವರ ಚಿತ್ತವನ್ನು ಹುಡುಕುತ್ತೇವೆ.



ಇಬ್ರಿಯರಿಗೆ 11:1–6 ನ್ನು ಓದಿರಿ ನಮ್ಮ ಎಲ್ಲಾ ಪ್ರಾರ್ಥನೆಯಲ್ಲಿ ಬಹಳ ಮುಖ್ಯವಾದದ್ದು ಯಾವುದು? ಮತ್ತು ದೇವರ ಬಳಿಗೆ ನಂಬಿಕೆಯಿಂದ ಬರುವುದು ಹಾಗೂ ನಂಬಿಕೆಯಿಂದ ಪ್ರಾರ್ಥಿಸುವುದು ಎಂದರೆ ಏನು?

ನಮ್ಮ ಪ್ರಾರ್ಥನೆಗಳಿಗೆ ನಂಬಿಕೆಯು ಜೊತೆಯಾಗದಿದ್ದರೆ ಸೈತಾನನು ಸೃಷ್ಟಿಸುವ ನಂಬಿಕೆಗೆ ವಿರುದ್ಧವಾಗಿರುವ ಕಲ್ಪನೆಯು ನಮ್ಮ ಪ್ರಾರ್ಥನೆಯನ್ನು ಆವರಿಸಿಕೊಳ್ಳುತ್ತದೆ. 'ಪ್ರಾರ್ಥನೆ ಮತ್ತು ನಂಬಿಕೆಯು ಬಹಳ ಹತ್ತಿರದ ಭಾಂದವ್ಯ  ಹೊಂದಿವೆ, ಮತ್ತು ಅವುಗಳನ್ನು ಒಟ್ಟಿಗೆ ಅಧ್ಯಯನ ಮಾಡಬೇಕು. ನಂಬಿಕೆಯ ಪ್ರಾರ್ಥನೆಯಲ್ಲಿ ಒಂದು ದೈವಿಕವಾದ ವಿಜ್ಞಾನವಿದೆ; ಯಶಸ್ಸಿನ ಜೀವನದ ಚೌಕಟ್ಟಿನಲ್ಲಿ ಆಲೋಚಿಸುವವರು ಈ ವಿಜ್ಞಾನದ ಅಡಿಯಲ್ಲಿ ಕೆಲಸಮಾಡುತ್ತಾರೆ.. ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತಿರೋ ಅದನ್ನೆಲ್ಲಾ ಹೊಂದಿದ್ದೆವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಮಗೆ ಹೇಳುತ್ತೇನೆ.' ಎಂದು ಕ್ರಿಸ್ತನು ಹೇಳುತ್ತಾನೆ (ಮಾರ್ಕ 11:24). 'ನಾವು ಕೇಳುವುದು ದೇವರ ಚಿತ್ತಕ್ಕೆ ಅನುಗುಣವಾಗಿರಬೇಕು; ಆತನು ವಾಗ್ದಾನ ಮಾಡಿರುವವುಗಳನ್ನು ಕೇಳಬೇಕು ಮತ್ತು ನಾವು ಯಾವುದನ್ನೂ ಹೊಂದಿದ್ದೇವೋ ಅದನ್ನು ದೇವರ ಚಿತ್ತವನ್ನು ನೆರವೇರಿಸುವುದಕ್ಕಾಗಿ ಉಪಯೋಗಿಸಬೇಕು. ಈ ಷರತ್ತುಗಳನ್ನು ನಾವು ಪಾಲಿಸಿದರೆ ವಾಗ್ದಾನವು ನಿಸ್ಸಂದಿಗ್ದವಾಗಿ ನಮ್ಮದಾಗುತ್ತದೆ.' ಎಲೆನ್ ಜಿ ವೈಟ್. ಪ್ರಾರ್ಥನೆ, ಪುಟ 57.

ನಿಮ್ಮ ಸ್ವಂತ ಪ್ರಾರ್ಥನೆಯ  ಜೀವನವನ್ನು ನೋಡಿಕೊಳ್ಳಿರಿ, ನೀವು ಯಾವುದಕ್ಕಾಗಿ ಪ್ರಾರ್ಥಿಸುತ್ತಿರಿ? ನಮ್ಮ ಪ್ರಾಧಾನ್ಯತೆಗಳ ಕುರಿತಾಗಿ ನಿಮ್ಮ ಪ್ರಾರ್ಥನೆ ಏನು ಹೇಳುತ್ತದೆ? ನೀವು ಇನ್ನೂ ಯಾವ ವಿಚಾರಗಳ ಕುರಿತಾಗಿ ಪ್ರಾರ್ಥಿಸಬೇಕಾಗಿದೆ.?

**ಪಾಠ 4ಲೋಕದ ಮಾರ್ಗದಿಂದ ತಪ್ಪಿಸಿಕೊಳ್ಳುವುದು ಜನವರಿ 20–26**

**ಬುಧವಾರ ಜನವರಿ 24**

## ಜ್ಞಾನದ ಜೀವನ

ಸತ್ಯವೇದದಲ್ಲಿ ನಾವು ಕಾಣುವ ಸುಂದರವಾದ ಕಥೆಗಳಲ್ಲಿ ಸೋಲೋಮನನು ಎಲ್ಲಾ ವಿಷಯಗಳಿಗಿಂತ ಮಿಗಿಲಾಗಿ ಜ್ಞಾನಕ್ಕಾಗಿ ಪ್ರಾರ್ಥಿಸುವುದು ಬಹಳ ಅದ್ಭುತವಾದ ಕಥೆಯಾಗಿದೆ. 'ಆದದರಿಂದ ಅದನ್ನು ಆಳುವುದಕ್ಕೂ ನ್ಯಾಯಾ ನ್ಯಾಯಗಳನ್ನು ಕಂಡುಹಿಡಿಯುವುದಕ್ಕೂ ನನಗೆ ವಿವೇಕವನ್ನು ದಯಪಾಲಿಸು, ಈ ಮಹಾ ಜನಾಂಗವನ್ನು ಆಳಲು ಸಮರ್ಥರು ಯಾರು ಎಂದು ಬೇಡಿಕೊಂಡನು.' (1 ಅರಸುಗಳು 3:9)

ದೇವರು ಹೇಳಿದ ಪ್ರಾಮುಖ್ಯವಾದ ಮಾತುಗಳು ಯಾವುವು? ಅರಸನಾದ ಸೋಲೋಮನನು ಒಂದು ವೇಳೆ ಈ ಮಾತುಗಳನ್ನು ಕೇಳಿದ್ದರೆ ಅವನು ತನ್ನ ಲೋಕದ ಆಸೆಗಳಿಂದ ನಾಶವಾಗುವುದನ್ನು ತಪ್ಪಿಸಿಕೊಳ್ಳಬಹುದಾಗಿತ್ತು ದೇವರು ಇಲ್ಲಿ ಹೇಳಿದ ಮಾತುಗಳು ನಮಗೂ ಕೂಡ ಯಾಕೆ ಬಹಳ ಪ್ರಾಮುಖ್ಯವಾಗಿವೆ. 1 ಅರಸುಗಳು 3:14 1 ಯೋಹಾನ 5:3 1 ಪೇತ್ರನು 4:17 ನ್ನು ಕೂಡ ಓದಿರಿ.

ಸೋಲೋಮನನಿಗೆ ವಿಶೇಷವಾದ ಜ್ಞಾನವಿತ್ತು, ಆದರೆ ಜ್ಞಾನದ ಅನುಸಾರವಾಗಿ ಜೀವಿಸದಿದ್ದರೆ ಮತ್ತು ಉಪಯೋಗಿಸದಿದ್ದರೆ ಅದು ಕೇವಲ ಒಂದು ಮಾಹಿತಿ ಯಾಗುತ್ತದೆ. ಸತ್ಯವೇದದ ಪ್ರಕಾರ ಜ್ಞಾನವನ್ನು ಸರಿಯಾಗಿ ಉಪಯೋಗಿಸದಿದ್ದರೆ ಅದು ಸರಿಯಾದ ಜ್ಞಾನವಲ್ಲ. ದೇವರ ಕುರಿತಾಗಿ ಮತ್ತು ಆತನ ಆಜ್ಞೆಗಳ ಕುರಿತಾದ ಸರಿಯಾದ ಜ್ಞಾನವನ್ನು ಹೊಂದಿರುವ ಅನೇಕರು ದೇವರ ರಾಜ್ಯದಿಂದ ದೂರ ಉಳಿಯುವರು. ಆದರೆ ದೇವರು ಕರೆದ ಉದ್ದೇಶದಿಂದ ದೂರವಾಗುವಂತೆ ಸೋಲೋಮನನಲ್ಲಿದ್ದ ಅವಿಧೆಯತೆಯೇ ಕಾರಣವಾಗಿತ್ತು. ತನ್ನ ಜೀವನದ ಕೊನೆಯ ಭಾಗದಲ್ಲಿ ಮಾತ್ರ ಅವನು ತನ್ನ ನಜವಾದ ಅರಿವಿಗೆ ಬಂದು, ನಮ್ರತೆಯಲ್ಲಿ ಹೀಗೆ ಬರೆಯುತ್ತಾನೆ: 'ಜ್ಞಾನವು ಹವಳಕ್ಕಿಂತ ಶ್ರೇಷ್ಠ ಇಷ್ಟವಸ್ತುಗಳೆಲ್ಲವೂ ಅದಕ್ಕೆ ಸಮವಲ್ಲ.' (ಜ್ಞಾನೋಕ್ತಿಗಳು 8:11).



ವಿವೇಕವೆಂದರೆ ಜ್ಞಾನ ಮತ್ತು ತಿಳುವಳಿಕೆಗಳನ್ನು ಸರಿಯಾಗಿ ಉಪಯೋಗಿಸುವುದಾಗಿದೆ. ಜ್ಞಾನವು ವಾಸ್ತವಗಳನ್ನು ಪ್ರತಿನಿಧಿಸುತ್ತದೆ; ತಿಳುವಳಿಕೆಯೆಂದರೆ ಜ್ಞಾನ ಮತ್ತು ತಿಳುವಳಿಕೆಯನ್ನು ನಮ್ಮ ಜೀವನದಲ್ಲಿ ಹೇಗೆ ಉಪಯೋಗಿಸುತ್ತೇವೆ ಅದರ ಮೇಲೆ ವಿವೇಕವೂ ಅವಲಂಬಿತವಾಗಿರುತ್ತದೆ. ಒಬ್ಬ ಒಳ್ಳೆಯ ಪಾರುಪತ್ಯಗಾರನಗೆ ಜ್ಞಾನ ಮತ್ತು ತಿಳುವಳಿಕೆಯ ಅವಶ್ಯಕತೆಗಿಂತ ಜ್ಞಾನ ಮತ್ತು ತಿಳುವಳಿಕೆಯನ್ನು ಹೇಗೆ ಉಪಯೋಗಿಸಬೇಕು ಎಂಬುದರ ಅನುಭವವು ಸಾಕಾಗುತ್ತದೆ.

ಒಬ್ಬ ಮನುಷ್ಯನಿಗೆ ನೀಡಲಾಗಿರುವ ಜ್ಞಾನ ಮತ್ತು ವಿವೇಕವನ್ನು ಸರಿಯಾಗಿ ಉಪಯೋಗಿಸದೆ, ಅದನ್ನು ಲೋಕದ ವಸ್ತುಗಳ ಮೇಲಿನ ವ್ಯಾಮೋಹಕ್ಕಾಗಿ ಉಪಯೋಗಿಸಿದಾಗ ಅವು ಹೇಗೆ ನಮ್ಮಿಂದ ದೂರವಾಗುತ್ತವೆ ಎಂಬುದಕ್ಕೆ ಸೋಲೋಮನನ ಜೀವನವು ಒಂದು ಒಳ್ಳೆಯ ಉದಾಹರಣೆಯಾಗಿದೆ.

1 ಕೊರಿಂಥ 3:19 ಮತ್ತು ಜ್ಞಾನೋಕ್ತಿಗಳು 24:13, 14 ನ್ನು ಓದಿರಿ, ಈ ಎರಡೂ ವಚನಗಳಲ್ಲಿ ಹೇಳಿರುವ ವಿವೇಕಗಳ ವಿಧಾನಗಳ ವ್ಯತ್ಯಾಸವೇನು? ಈ ವ್ಯತ್ಯಾಸದ ಕುರಿತಾಗಿ ನಿಮ್ಮ ಸಬ್ಬತ್ ಶಾಲೆಯಲ್ಲಿ ಚರ್ಚಿಸಿರಿ?

**ಪಾಠ 4ಲೋಕದ ಮಾರ್ಗದಿಂದ ತಪ್ಪಿಸಿಕೊಳ್ಳುವುದು ಜನವರಿ 20–26**

**ಗುರುವಾರ ಜನವರಿ 25**

## ಪರಿಶುದ್ಧಾತ್ಮನು

ಮಹಾ ಹೋರಾಟವು ವಾಸ್ತವವಾಗಿದೆ, ನಮ್ಮ ಆತ್ಮಕ್ಕಾಗಿ ಎರಡೂ ಕಡೆಯವರೂ ಕೂಡ ಹೋರಾಟ ನಡೆಸುತ್ತಿದ್ದಾರೆ. ಒಬ್ಬರೂ ನಮ್ಮನ್ನು ಕ್ರಿಸ್ತನ ಕಡೆಗೆ ಎಳೆಯುತ್ತಿದ್ದಾರೆ (ಯೋಹಾನ 6:44) ಮತ್ತೊಬ್ಬರು ಲೋಕದ ಕಡೆಗೆ ಎಳೆಯುತ್ತಿದ್ದಾರೆ (1 ಯೋಹಾನ 2:16). ನಮ್ಮನ್ನು ನಾವು ಪರಿಶುದ್ಧಾತ್ಮನ ಶಕ್ತಿಗೆ ಒಳಪಡಿಸಿದರೆ ಆತನು ನಮ್ಮನ್ನು ಲೋಕದ ಆಸೆಯಿಂದ ಮತ್ತು ಲೋಕದ ವ್ಯಾಮೋಹದಿಂದ ಬಿಡಿಸುತ್ತಾನೆ.

ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತನಾಡದೆ

ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು.(ಯೋಹಾನ 16:13 ಮತ್ತು ಯೋಹಾನ 14:16) ಪರಿಶುದ್ದಾತ್ಮನು ನಮ್ಮನ್ನು ಲೋಕದಲ್ಲಿ ಕಾಣುವ ವ್ಯಾಮೋಹ ಮತ್ತು ಬಯಕೆಗಳಿಗೆ ವಿರುದ್ದವಾಗಿ ದೇವರ ವಾಕ್ಯದ ನಿಯಮಗಳು ಮತ್ತು ನಂಬಿಕೆಯ ಅಧೀನದಲ್ಲಿ ಜೀವಿಸುವಂತೆ ಸಹಾಯ ಮಾಡುತ್ತಾನೆ.ಪರಲೋಕದಲ್ಲಿ ಒಂದು ಯಶಸ್ವಿಯಾದ ಜೀವನವನ್ನು ನಾವು ಹೊಂದಬೇಕಾದರೆ ಈ ಲೋಕದಲ್ಲಿ ನಾವು ಪರಿಶುದ್ದಾತ್ಮನ ಅಧೀನದಲ್ಲಿ ಜೀವಿಸಬೇಕಾಗುತ್ತದೆ.

'ನಿಮ್ಮ ನಂಬಿಕೆಯು ಮಾನುಷ ಜ್ಞಾನವನ್ನು ಅಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಅಧಾರ ಮಾಡಿಕೊಂಡಿರಬೇಕು. ಎಂದು ಪೌಲನು ಸಲಹೆ ನೀಡುತ್ತಾನೆ. (1 ಕೊರಿಂಥ 2:5) ಲೋಕದ ಆಸೆಯು ಅದರಲ್ಲೂ ವಿಶೇಷವಾಗಿ ಆಸ್ತಿಯ ವಿಚಾರವು ನಮ್ಮನ್ನು ದೇವರ ಬಳಿಯಿಂದ ದೂರ ಸೆಳೆಯುತ್ತದೆ. ಅದಕ್ಕೆ ವಿರುದ್ದವಾಗಿ, ನಾವು ಅದನ್ನು ಎದುರಿಸದೆ ಹೋದರೆ ಪರಿಶುದ್ದಾತ್ಮನ ಶಕ್ತಿಯು ನಮ್ಮನ್ನು ಕ್ರಿಸ್ತನ ಕಡೆಗೆ ಸಳೆಯುತ್ತದೆ.

ಲೋಕದ ಮತ್ತು ಅದರ ಮೇಲಿನ ವ್ಯಾಮೋಹದ ಜೊತೆಗಿನ ಹೋರಾಟದಲ್ಲಿ ಯಶಸ್ಸು ಸಿಗಬೇಕಾದರೆ ನಮ್ಮ ಹೊರಗಿನ ಶಕ್ತಿಯಿಂದ ಮಾತ್ರ ಅದು ಸಾಧ್ಯ. ಯೆಹೆಜ್ಕೆಲನು 36:26, 27; ಯೋಹಾನ 14:26; ಮತ್ತು ಎಫೆಸ 3:16,17 ನ್ನು ಓದಿರಿ. ನಮ್ಮ ಸಂಪೂರ್ಣ ಅಧೀನತೆಯನ್ನು ಪರಿಶುದ್ದಾತ್ಮನಿಗೆ ಒಪ್ಪಿಸಿದಾಗ ನಮಗೆ ಅಧ್ಯಾತ್ಮಿಕ ಜಯ ಸಿಗುವ ಹಾಗೆ ದೇವರು ಯಾವ ರೀತಿಯಲ್ಲಿ ಸಹಾಯ ಮಾಡುತ್ತಾನೆ.

---

---

ಸುಳ್ಳು ಬೋಧನೆ ಮತ್ತು ಅಚಾರಗಳಿಂದ ಸೈತಾನನು ನಮ್ಮ ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸುತ್ತಾನೆ. ಜನರನ್ನು ಸುಳ್ಳು ನಿಯಮಗಳಿಗೆ ಅಧೀನರನ್ನಾಗಿ ಮಾಡಿ ಅವರ ಸ್ವಭಾವವನ್ನು ಬದಲಾಯಿಸುತ್ತಾನೆ. ದೇವರ ವಾಕ್ಯದ ಮೂಲಕ ಪರಿಶುದ್ದಾತ್ಮನು ನಮ್ಮ ಮನಸ್ಸಿನ ಜೊತೆ ಮಾತನಾಡುತ್ತಾನೆ,ಮತ್ತು ಹೃದಯದ ಮೇಲೆ ಸತ್ಯದ ಗುರುತನ್ನು



ಒತ್ತುತ್ತಾನೆ. ಇದರ ಮೂಲಕ ಸುಳ್ಳನ್ನು ಬಯಲಿಗೆ ತಂದು, ಮತ್ತು ಅದನ್ನು ಆತ್ಮನಂದ ಓಡಿಸುತ್ತಾನೆ. ಸತ್ಯದ ಆತ್ಮನ ಮೂಲಕ ದೇವರ ವಾಕ್ಯದ ಸಹಾಯದಿಂದ ಕ್ರಿಸ್ತನು ಆಯ್ಕೆಯಾದ ಜನರನ್ನು ತನ್ನ ಕಡೆಗೆ ಸೆಳೆಯುತ್ತಾನೆ.? **ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಎಜಸ್, ಪುಟ 671**.

ಪರಿಶುದ್ದಾತ್ಮನು ಸತ್ಯದ ಕುರಿತಾಗಿ ವರದಿಯನ್ನು ನೀಡುತ್ತಾನೆ ಮತ್ತು ಕ್ರಿಸ್ತನು ಈ ಲೋಕವನ್ನು ಬಿಟ್ಟು ಹೋಗುವಾಗ ದೇವರ ಪ್ರತಿನಿಧಿಸಲು ಪರಿಶುದ್ದಾತ್ಮನು ಸರಿಯಾದ ವ್ಯಕ್ತಿಯಾಗಿದ್ದಾನೆ. ಪರಿಶುದ್ದಾತ್ಮನು ನಮಗೆ ಶಕ್ತಿಯನ್ನು ನೀಡಿ ಲೋಕವು ತೋರಿಸುವ ಮಾಯೆಗಳನ್ನು ಗೆಲ್ಲಲ್ಲು ಸಹಾಯ ಮಾಡುತ್ತಾನೆ.

ಲೋಕವು ನಮ್ಮನ್ನು ಸೆಳೆಯುತ್ತದೆ ಅಲ್ಲವೇ, ಅದು ಸೆಳೆಯುದಿಲ್ಲವೋ? ಈಗ ನೀವು ಮಾಡುವ ಆಯ್ಕೆಗಳು ಲೋಕದ ಶೋಧನೆಗಳಿಂದ ತಪ್ಪಿಸಿಕೊಳ್ಳಲು ಹೇಗೆ ಸಹಾಯ ಮಾಡುತ್ತವೆ?

**ಪಾಠ 4ಲೋಕದ ಮಾರ್ಗದಿಂದ ತಪ್ಪಿಸಿಕೊಳ್ಳುವುದು ಜನವರಿ 20–26**

**ಶುಕ್ರವಾರ ಜನವರಿ 26**

## ಹೆಚ್ಚಿನ ಚಿಂತನೆ

ಪಾರುಪತ್ಯಗಾರನು ಕರ್ತವ್ಯ ಮತ್ತು ಪ್ರೀತಿ ಎಂಬ ಎರಡು ನಿಯಮಗಳ ಅಡಿಯಲ್ಲಿ ಕೆಲಸ ಮಾಡುತ್ತಾನೆ. 'ಕರ್ತವ್ಯಕ್ಕೆ ಅವಳಿ ಸಹೋದರಿ ಇದ್ದಾಳೆ ಅದುವೇ ಪ್ರೀತಿ; ಇವು ಎರಡೂ ಸೇರಿಕೊಂಡು ಎಲ್ಲವನ್ನೂ ಸಾಧಿಸಬಹುದು ಆದರೆ ಅವುಗಳನ್ನು ಬೇರ್ಪಡಿಸಿದರೆ ಒಳ್ಳೆಯದನ್ನು ಮಾಡಲು ಸಾಧ್ಯವಿಲ್ಲ.' **ಎಲೆನ್ ಜಿ ವೈಟ್ ಟೆಸ್ಟಿಮೊನಿಸ್ ಫಾರ್ ದಿ ಚರ್ಚಿಸ್, ಸಂಪುಟ 4 ಪುಟ 62**. ಪ್ರೀತಿಯನ್ನು ಕಾರ್ಯರೂಪದಲ್ಲಿ ತೋರಿಸುವುದೇ ಕರ್ತವ್ಯವಾಗಿದೆ. ನಾವು ಕ್ರಿಸ್ತನ ತ್ಯಾಗದ ಮೇಲೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದಾಗ ಮಾತ್ರ ನಮ್ಮಲಿರುವ ಪ್ರೀತಿಯು ಕರ್ತವ್ಯದ ರೂಪದಲ್ಲಿ ಹೊರಹೊಮ್ಮುತ್ತದೆ.

ಲೋಕದ ನಿಯಮಗಳು ಇದಕ್ಕೆ ವಿರುದ್ದವಾಗಿವೆ. ದ್ವೇಷ ಮತ್ತು ಅದರ ಅವಳಿ ಸಹೋದರಿ ತಿರುಗಿ ಬೀಳುವುದು. ತಿರುಗಿ ಬೀಳುವುದು ದ್ವೇಷವನ್ನು ಕಾರ್ಯರೂಪದಲ್ಲಿ

ತೋರಿಸುವುದಾಗಿದೆ. ಸೈತಾನನು ದೇವರ ವಿರುದ್ದವಾಗಿ ತಿರುಗಿಬಿದ್ದನು. (ಯೆಹೆಜ್ಕೆಲನು 28:16, 17) ಮತ್ತು ಅವನು ಸಂಪೂರ್ಣವಾಗಿ ನಾಶವಾಗುವರೆಗೂ ಅದನ್ನು ನಿಲ್ಲಿಸುವುದಿಲ್ಲ. ಅವನು ಪ್ರೀತಿಯ ಅಧಿಕಾರವನ್ನು ಅಧಿಕಾರಕ್ಕಾಗಿ ಪ್ರೀತಿಯಾಗಿ ಬದಲಾಯಿಸಿದನು.ಯೇಸುವು ಹೊಂದಿದ್ದ ಅಧಿಕಾರ ಮತ್ತು ಶಕ್ತಿಯನ್ನು ಕಂಡು ಧಾರ್ಮಿಕ ನಾಯಕರು ಆತನನ್ನು ದ್ವೇಷಿಸಿದರು. (ಮತ್ತಾಯ 22:29)ಅವರು ದೇವಾಲಯದಿಂದ ಓಡಿಹೋದಾಗ ಅಥವಾ ಆತನ ಮಿಂಚಿನ ನೋಟದಿಂದ ದೂರ ಓಡಿಹೋದಾಗಲೂ ಕೂಡ ಅವರು ತಮ್ಮ ವಿಧಾನಗಳನ್ನು ಬದಲಾಯಿಸಿಕೊಳ್ಳಲಿಲ್ಲ.

**ಚರ್ಚಿಸಬೇಕಾದ ಪ್ರಶ್ನೆಗಳು**

1. ಪ್ರೀತಿ ಮತ್ತು ಕರ್ತವ್ಯದ ಕುರಿತಾಗಿ ಹೆಚ್ಚಾಗಿ ಆಲೋಚಿಸಿರಿ. ಎಲೆನ್ ಜಿ ವೈಟ್ ರವರನ್ನು ಅವುಗಳನ್ನು ಅವಳಿಗಳೂ ಎಂದು ಕರೆದ ನಂತರ ಒಂದು ಮತ್ತೊಂದರ ಸಹಾಯವಿಲ್ಲದೆ ಇದ್ದರೆ 'ಒಳಿತನ್ನು ಮಾಡಲು ಸಾಧ್ಯವಿಲ್ಲ' ಎಂದು ಹೇಳುವುದರ ಅರ್ಥವೇನು?ಕರ್ತವ್ಯವಿಲ್ಲದ ಪ್ರೀತಿ ಹೇಗೆ ಕಾಣಿಸುತ್ತದೆ ಮತ್ತು ಪ್ರೀತಿಯಿಲ್ಲದ ಕರ್ತವ್ಯ ಹೇಗೆ ಕಾಣಿಸುತ್ತದೆ? ಅವು ಯಾಕೆ ಒಂದಾಗಿರಬೇಕು?

2. ಈ ವಾರದ ಸ್ಮರಣ ವಾಕ್ಯವು ಹೀಗೆ ಹೇಳುತ್ತದೆ ?ಧನವು ಕೋಪದ ದಿನದಲ್ಲಿ ವ್ಯರ್ಥ; ಧರ್ಮವು ಮರಣವಿಮೋಚಕ. ಧನವನ್ನೇ ನಂಬಿದವನು ಬಿದ್ದು ಹೋಗುವನು ಸದ್ದರ್ಮಿಯು ಕುಡಿಯ ಹಾಗೆ ಚಿಗುರುವನು. (ಜ್ಞಾನೋಕ್ತಿಗಳು 11:4, 28). ಈ ವಾಕ್ಯದ ಅರ್ಥವೇನು? ಈ ವಾಕ್ಯವು ಆಸ್ತಿಯ ಕುರಿತಾಗಿ ಏನು ಹೇಳುತ್ತದೆ? ಇದು ಏನನ್ನು ಹೇಳುವುದಿಲ್ಲ?

3. ನಿಮ್ಮ ತರಗತಿಯಲ್ಲಿ ಸೋಲೋಮನನ ಜೀವನದ ಕುರಿತಾಗಿ ಚರ್ಚಿಸಿರಿ. ಅವನು ಹಾದಿಯಿಂದ ಹೇಗೆ ದೂರ ಹೋದನು. ಲೋಕದ ಅಸೆ ಮತ್ತು ಅದರ ಶೂನ್ಯದ ಕುರಿತಾಗಿ ಹೇಳುವ ವಚನಗಳನ್ನು ಪ್ರಸಂಗಿಯಲ್ಲಿ ಹುಡುಕಿರಿ. ಈ ವಾರದಲ್ಲಿ ನಾವು ಪ್ರಾರ್ಥನೆಯ ಕುರಿತಾಗಿ ಏನು ಕಲಿತಿದ್ದೇವೆ ಮತ್ತು ಕ್ರಿಸ್ತನ ಜೊತೆಗಿನ ನಮ್ಮ ಸಂಬಂಧವು ಲೋಕದ ಹಾದಿಯಿಂದ ನಮ್ಮನ್ನು ತಪ್ಪಿಸಿ ಅಧ್ಯಾತ್ಮಿಕ ಹಾದಿಯಲ್ಲಿ ಸಾಗುವಂತೆ ಹೇಗೆ ಸಹಾಯ ಮಾಡುತ್ತದೆ?



4. ಜನರು ವಿಸ್ತಾರವಾದ ಅಸ್ತಿಯನ್ನು ಹೊಂದದೆ ಇದ್ದರೂ ಕೂಡ ಹೇಗೆ ಸೈತಾನನ ಅವರ ಮುಂದೆ ಇಡುವ ಬಲೆಯಲ್ಲಿ ಬೀಳುವರು?

5. ವಿವಿಧ ಜ್ಞಾನಗಳ ಕುರಿತಾಗಿ ಬುಧವಾರ ಪಾಠದಲ್ಲಿ ಕೇಳಲಾಗಿರುವ ಕೊನೆಯ ಪ್ರಶ್ನೆಗೆ ಯಾವ ಉತ್ತರವನ್ನು ಕಂಡುಕೊಳ್ಳುವಿರಿ?